**ಇ.ಸಿ.ಎ.01/2019, ಆರ್.ಡಬ್ಲ್ಯೂ-2 ಹೆಸರುಃ ಸುಮಿತ್ರಮ್ಮ**

**ದಿಃ24-12-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಬಿ.ಎನ್.ಪಿ ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಹೊಳಲ್ಕೆರೆ ಪೊಲೀಸ್ ಠಾಣೆಯ ಠಾಣಾ ಮೊಕದ್ದಮೆ ಸಂಖ್ಯೆ 213/2018 ರ ದೂರು, ಪ್ರ.ವ. ವರದಿ, ಮಹಜರ್, ವಾಹನ ಅಮಾನತ್ತು ಪಂಚನಾಮೆ, ಇಂಡೆಮಿನಿಟಿ ಬಾಂಡ್ ಮತ್ತು ದೋಷಾರೋಪಣ ಪಟ್ಟಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ನಿಆರ್-2 ರಿಂದ 7 ಎಂದು ಗುರುತಿಸಲಾಯಿತು. ತನಿಖಾಧಿಕಾರಿಗಳು ನನಗೆ ನೀಡಿರುವ ಐದು ನೋಟೀಸುಗಳನ್ನು ಹಾಜರುಪಡಿಸಿದ್ದು ನಿಆರ್-8 ರಿಂದ 12 ಎಂದು ಗುರುತಿಸಲಾಯಿತು. ನಾನು ತನಿಖಾಧಿಕಾರಿಗೆ ನೀಡಿರುವ ನೋಟೀಸಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ನಿಆರ್-13 ಮತ್ತು 14 ಎಂದು ಗುರುತಿಸಲಾಯಿತು. ನಾನು ತಾಲ್ಲೂಕು ಕಾನೂನು ಸೇವಾ ಸಮಿತಿ, ಹೊಳಲ್ಕೆರೆರವರಿಗೆ ನೀಡಿದ್ದ ಅರ್ಜಿಯ ಕುರಿತು ತನಿಖಾಧಿಕಾರಿಗೆ ನೀಡಿರುವ ನೋಟೀಸು ಮತ್ತು ಪಿ.ಎಲ್.ಸಿ ಸಂಖ್ಯೆ 1/2019 ರ ನೋಟೀಸಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ನಿಆರ್-15 ಮತ್ತು 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ